ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 889/2021 ಸಿ.ಡಬ್ಲ್ಯೂ–7 ಪಿ.ಡಬ್ಲ್ಯೂ-04

| | | |
|---|---|---|
| ಹೆಸರು | ಃ | ರಾಮಕೃಷ್ಣ |
| ತಂದೆಃಗಂಡ | ಃ | ಸಿದ್ದಯ್ಯ |
| ವಯುಸ್ಸು | ಃ | 38 ವರ್ಷ |
| ಉದ್ಯೋಗ | : | ಅಬಕಾರಿ ಮುಖ್ಯ ಪೇದೆ ಚಿಂಚೋಳಿ |
| ವಾಸಸ್ಥಳ | ಃ | ಚಿಂಚೋಳಿ |

ದಿನಾಂಕಃ 24.07.2025

ಸತ್ಯ ಪ್ರತಿಜ್ಞೆಯ ಮೇರೆಗೆ.

---

ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ

ನಾನು 2015 ರಿಂದ ಫೆಬ್ರವರಿ 2024 ರವರೆಗೆ ಆಳಂದ ಅಬಕಾರಿ ಪೋಲಿಸ ಠಾಣೆಯಲ್ಲಿ ಅಬಕಾರಿ ಪೇದೆ ಎಂದು ಕಾರ್ಯ ನಿರ್ವಹಿಸಿರುತ್ತೇನೆ.

ದಿ: 16-03-2020 ರಂದು ಚಾಸಾ-3 ರವರು ಚಾಸಾ 8 ರವರು ಅವರಿಗೆ ಬಂದ ಮಾಹಿತಿ ಪ್ರಕಾರ ಮುನ್ನೊಳ್ಳಿ ಗ್ರಾಮದ ಮುಖಾಂತರ ದಾಳಿ ಮಾಡಲು ಹೊಗುವುದು ಇದ್ದು, ಪಂಚರ ಆಗಲು ಯಾರು ಒಪ್ಪದ ಕಾರಣ ಪಂಚರವನ್ನು ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ನಾನು ಆಳಂದ ಬಸ್ಸ ನಿಲ್ದಾಣದ ಹತ್ತಿರ ನಿಂತುಕೊಂಡ ಚಾಸಾ 1 ಮತ್ತು 2 ರವರಿಗೆ ವಿಷಯ ತಿಳಿಸಿ ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ನಮ್ಮ ಕಚೇರಿಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಅವರು ಒಬ್ಬರಿಗೊಬ್ಬರು ಪರಿಚಯ ಮಾಡಿಕೊಂಡ ನಂತರ ನಮ್ಮ ಇಲಾಖಾ ವಾಹನ ಸಂಖ್ಯೆ ಕೆ ಎ 32/ಡಿ-3308 ರಲ್ಲಿ ಕರದುಕೊಂಡು ಹೋಗಿ ಮುನ್ನೊಳ್ಳಿ ಬಸ್ಸ ನಿಲ್ದಾಣದ ಹತ್ತಿರ ವಾಹನವನ್ನು ಮರೆಯಾಗಿ ನಿಲ್ಲಿಸಿ ನಾವು ವಾಹನ ತಪಾಸಣೆ ಮಾಡುತ್ತಿದ್ದೇವು. ಆರೋಪಿಯು ತಡಕಲದಿಂದ ಮುನ್ನೊಳ್ಳಿ ಬಸ್ಸ ನಿಲ್ದಾಣದ ಹತ್ತಿರ ಬರುವಾಗ ನಾವು ಸಮವಸ್ತ್ರದಲ್ಲಿ ಇದ್ದದನ್ನು ನೋಡಿ ತನ್ನ ವಾಹನ ಸಂಖ್ಯೆ ಕೆ ಎ 32/ಜೆ-5097 ನನ್ನು ಹೀರೋಹೊಂಡಾ ಸಿಡಿ-100 ನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ. ಸದರಿ ವಾಹನದ ಮೇಲೆ ಗೊಬ್ಬರ ಚೀಲ ಇತ್ತು. ನಾವು ಆರೋಪಿಯನ್ನು ಹಿಡಿಯಲು ಪ್ರಯತ್ನ ಪಟ್ಟರು ಅವನು ಸಿಗಲಿಲ್ಲ. ನಾವು ಗೊಬ್ಬರ ಚೀಲವನ್ನು ತೆಗೆದು ನೋಡಿದಾಗ ಅದರಲ್ಲಿ ಮೂರು ರಟ್ಟಿನ ಡಬ್ಬಿಗಳು ಇದ್ದವು, ಅವುಗಳನ್ನು ತೆಗೆದುನೋಡಿದಾಗ ಅದರಲ್ಲಿ 90 ಎಮ.ಎಲ್.ನ ಓರಿಜನಲ್ ಚಾಯಸ್ 96 ವಿಸ್ಕಿ ಪೌಚಗಳು ಇದ್ದವು. ಅದೇ ರೀತಿ ಇನ್ನೂ ಎರಡು ಡಬ್ಬಗಳಲ್ಲಿಯೂ ಸಹ 90 ಎಮ.ಎಲ್.ನ 96

ಓರಿಜನಲ್ ಚಾಯಸ್ ವಿಸ್ಕಿ ಪೌಚಗಳು ಇದ್ದವು. ಒಟ್ಟು 288 ವಿಸ್ಕಿ ಪೌಚಗಳು ಇದ್ದವು. ಅಲ್ಲಿ ಇದ್ದ ಜನರಿಗೆ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಅವರು ಗೊತ್ತಿಲ್ಲ ಅಂತಾ ಹೇಳಿರುತ್ತಾರೆ ಮತ್ತು ಅವರಿಗೆ ಪಂಚರಾಗಲು ಕೇಳಿಕೊಂಡಿದ್ದು ಅವರು ಒಪ್ಪದ ಕಾರಣ ಚಾಸಾ 1 ಮತ್ತು 2 ರವರನ್ನು ಪಂಚರಾಗಲು ತಿಳಿಸಿ ನಂತರ ಅವರ ಸಮಕ್ಷಮ ಪ್ರತಿಯೊಂದು ಡಬ್ಬಿಯಿಂದ ಎರಡೆರಡು ಟೆಟ್ರಾ ಪ್ಯಾಕಗಳನ್ನು ಹೊರತೆಗೆದು ಅವುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿರುತ್ತೇನೆ. ಇಲಾಖಾ ಮುದ್ರೇ 437 ನ್ನು ಹಾಕಿರುತ್ತೇನೆ ಮತ್ತೆ ವಾಹನ ಸಂಖ್ಯೆ ಸಂಖ್ಯೆ ಕೆ ಎ 32/ಜೆ-9057 ನ್ನು ನಮ್ಮ ತಾಬೇಗೆ ತೆಗೆದುಕೊಂಡು ಪಂಚನಾಮೆಯನ್ನು 2.45 ರಿಂದ 3.45 ರವರೆಗೆ ಜರುಗಿಸಿ ನಂತರ ಪಂಚರ ಸಹಿ ಪಡೆದು ಮು.ಮಾಲು ಮತ್ತು ವರದಿಯೊಂದಿಗೆ ಕಚೇರಿಗೆ ಹೋಗಿ ವರದಿ ಸಲ್ಲಿಸಿರುತ್ತೇವೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

ಪಾ. ಸವಾಲುಃ ಆರೋಪಿ ಪರ ಶ್ರೀ. ಕೆ. ಮಲ್ಲಿಕಾರ್ಜುನ ವಕೀಲರಿಂದಃ

ನನಗೆ ಚಾಸಾ 3 ರವರು 12.45 ಗಂಟೆಗೆ ಬಾತ್ಮಿ ಬಂದ ವಿಷಯವನ್ನು ತಿಳಿಸಿರುತ್ತಾರೆ. ಅವರಿಗೆ ಎಷ್ಟು ಗಂಟೆಗೆ ಬಾತ್ಮಿ ಬಂದಿತ್ತು ನನಗೆ ಗೊತ್ತಿಲ್ಲ. ನನಗೆ ವಿಷಯ ತಿಳಿಸಿದ ಮೇಲೆ 5 ರಿಂದ 10 ನಿಮಿಷಗಳಲ್ಲಿ ಪಂಚರನ್ನು ಕರೆ ತರಲು ಹೋಗಿರುತ್ತೇನೆ. ನಾವು ಮುನ್ನೊಳ್ಳಿ ಬಸ್ಸ ನಿಲ್ದಾಣ ಹತ್ತಿರ ಹೋದಾಗ ಸುಮಾರು 1.45 ಗಂಟೆ ಆಗಿತ್ತು. ಘಟನಾ ಸಮಯದಲ್ಲಿ ಲಾಕ್‌ಡೌನ್ ಇತ್ತು ಎಂದರೆ ಆವಾಗ ಶುರು ಆಗಿತ್ತು ಎಂದು ನುಡಿಯುತ್ತಾರೆ. ಲಾಕ್‌ಡೌನ್ ಇದ್ದ ಕಾರಣ ಮಧ್ಯದ ಅಂಗಡಿಗಳು ಬಂದು ಇದ್ದವು ಎಂದರೆ ಸರಿ. ಚಾಸಾ 3 ರವರು ಆರೋಪಿಯು ಮು. ಮಾಲನ್ನು ಎಲ್ಲಿಂದ ಖರೀದಿ ಮಾಡಿದ್ದನು ಅಂತಾ ವಿಚಾರಣೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಕೆ.ಎ. 32/ಜೆ-9057 ನನ್ನು ಸೀಜ್ ಮಾಡಿ ನಮ್ಮ ದಾವೆಗೆ ತೆಗೆದುಕೊಂಡಿರುತ್ತೇವೆ. ಸದರಿ ವಾಹನಕ್ಕೂ ಮತ್ತು ಆರೋಪಿಗೂ ಸಂಬಂಧ ಇಲ್ಲ ಎಂದರೆ ಅದನ್ನು ಚಾಸಾ 3 ರವರು ವಿಚಾರಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ, ಆರೋಪಿಯು ಅನಕ್ಷರಸ್ಥನು ಇದ್ದು ಅವನು ಯಾವುದೇ ಮು.ಮಾಲನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಲಾಕ್‌ಡೌನ ಸಮಯದಲ್ಲಿ ಠಾಣೆಯ ಅಂಕೆ ಸಂಖ್ಯೆ ಹೆಚ್ಚಿಸಲು ನಮ್ಮ ಮೇಲಾಧಿಕಾರಿಗಳು ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ಸಲ್ಲಿಸಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ನಮೂದಿಸಿದ ಸಮಯ ಬೇರೆ ಇದ್ದು, ಅದು ಸರಿಯೋ ತಪ್ಪು ಎಂದರೆ ಸಾಕ್ಷಿಯು ಬೆರಳಚ್ಚುಗಾರರು ಬೇರೆ ಸಮಯವನ್ನು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾವು

ಯಾವುದೇ ರೇಡ್ ಮಾಡಿರುವುದಿಲ್ಲ, ಠಾಣೆಯಲ್ಲಿಯೇ ಕುಳಿತು ಆರೋಪಿಯ ವಿರುದ್ದ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.